## ಮೂವಿಗೆ ಹೋಗ್ಬರ್ತೀನಿ!

ಮುಂಬೈ ನಿವಾಸಿಯಾದ ಹನುಮೇಶ, ಹಳ್ಳಿಯಲ್ಲಿ ಜಮೀನ್ದಾರನಾಗಿದ್ದ ತನ್ನ ಬಾಲ್ಯದ ಗೆಳೆಯ ಕಿಟ್ಟುವಿನ ಮನೆಗೆ ಸಂಸಾರ ಸಮೇತ ಬಂದಿದ್ದ. ಅವರಿಗೆ ರಾಜಾತಿಥ್ಯ ನಡೆಯುತ್ತಿತ್ತು. ಹನುಮೇಶ ಒಂದೆರಡು ಸಲ, 'ಮೂವಿಗೆ ಹೋಗಿ ಬರ್ತೀನಿ ಅಂತ ಹೇಳಿ, ಮೂರ್ನಾಲ್ಕು ನಿಮಿಷಗಳ ನಂತರ ಬರುತ್ತಿದ್ದ. ಇದನ್ನು ಕಂಡು ಚಕಿತನಾದ ಕಿಟ್ಟುವಿನ ಮಗ, 'ಅದೇನು ಅಂಕಲ್, ನೀವು ಮಾತ್ರ ಎರಡ್ಮೂರು ನಿಮಿಷದ ಶಾರ್ಟ್ ಫಿಲ್ಮ್‌ಗೆ ಹೋಗಿ ಬರ್ತಿದೀರಾ? ನಮಗೆಲ್ಲಾ ತೋರಿಸಲ್ವಾ?' ಎಂದು ಕೇಳಿದಾಗ, 'ಅಯ್ಯೋ ರಾಮ, ಅದು ನೋಡೋದಲ್ಲಾ, ಅವರವರೇ ಮಾಡೋದು' ಎಂದ ಹನುಮೇಶ. 'ಏನಯ್ಯಾ ಹಾಗಂದರೆ?' ಎಂದು ಗೆಳೆಯ ಕೇಳಿದ್ದಕ್ಕೆ, 'ಮೂವಿ ಅಂದ್ರೆ, ಮೂತ್ರ ವಿಸರ್ಜನೆ!' ಎಂದ.

**ವಿ. ವಿಜಯೇಂದ್ರ ರಾವ್**



---



## ಬ್ಯಾರೆ ಡಿಸೈನ್

ಗಂಡ–ಹೆಂಡತಿ ವಿಜಿ ಮತ್ತು ರಮೇಶ ಸಂಜೆಯ ಹೊತ್ತು, ಆರಾಮಾಗಿ ಟೀವಿ ನೋಡುತ್ತ, ಕಾಫಿ ಕುಡಿಯುತ್ತ ಕೂತಿದ್ದರು. ವಿಜಿ ಕೇಳಿದಳು, 'ರೀ, ನೀವು ನನ್ನ ನೋಡೋಕೆ ಬಂದಾಗ ನಮ್ಮ ತಂದೆ ಹತ್ತಿರ ತುಂಬಾ ಹೊತ್ತು ಮಾತನಾಡ್ತಾ ಇದ್ರಿ ಅಲ್ಲಾ, ಏನದು?' ಅಂತ. ರಮೇಶ ಹೇಳಿದ. 'ಅದೇ ಕಣೆ, ನೀವು ಸೀರೆ ಅಂಗಡಿಗೆ ಹೋದಾಗೆಲ್ಲಾ ಅಂಗಡಿಯವನ ಹತ್ತಿರ ಅಷ್ಟು ಹೊತ್ತು ಏನು ಮಾತಾಡ್ತಾ ಇರ್ತೀರಿ?' ಎಂದಾಗ ವಿಜಿಗೆ ಅರ್ಥವಾಗಲಿಲ್ಲ. 'ಬಿಡಿಸಿ ಹೇಳ್ರಿ?' ಎಂದಳು. 'ಏನಿಲ್ಲಾ, ಸೇಮ್ ಕಲರದಾಗ ಬ್ಯಾರೆ ಡಿಸೈನ್ ಇದ್ರೆ ತೋರಿಸಿ' ಅಂತ ಹೇಳತಾ ಇದ್ದೆ ಕಣೇ.

**ಮಹಾಂತೇಶ ಬಾಗೇವಾಡಿ**